ಹೊರಟ ಪಾಂಡವರ ಬೀಳ್ಕೊಡುವಂತೆ ಜನ ಸೇರಿದ್ದರು. ಅಪ್ಪನೋ ಹಿಂತಿರುಗಿ ಬರಲೇ ಇಲ್ಲ. ಹಿಮಾಲಯದ ತಪ್ಪಲಲ್ಲಿ ಹುದುಗಿಹೋದ ಅಪ್ಪನ ಅವಶೇಷವೂ ಸಿಗಲಿಲ್ಲ. ತಿಪ್ಪಾಭಟ್ಟರ ಮನೆಯ ಕಣ್ಣಿಲ್ಲದ ಆ ಅಜ್ಜಿಯೊಂದು ಸದಾ 'ರಾಮ್ ಮಾಣಿ ಸೀದಾ ಕೈಲಾಸಕ್ಕೆ ಹೋದ. ನಡ್ಕಂಡು ಕೈಲಾಸಕ್ಕೆ ಹೋದವ ಇವೊಬ್ನೆಯ' ಎಂದೆಲ್ಲ ಹಲುಬುತ್ತಿದ್ದಳು.

ಅಪ್ಪನ ನೆನಪಾದಾಗೆಲ್ಲ ಒಂದು ಬಾರಿ ತಾಕಿಟತಕ ದಿನ್ನಾ ದೀಕಿಟತಕ ಧಿನ್ನಾ ಎಂದು ಗೆಜ್ಜೆಕಟ್ಟಬೇಕೆನಿಸಿ ಸೂಟ್‌ಕೇಸಿನಿಂದ ಗೆಜ್ಜೆ ಎತ್ತಿ ಮುತ್ತಿಟ್ಟು ತಡವಿ ತಬ್ಬಿಕೊಳ್ಳುತ್ತಿದ್ದಳು, ಮತ್ತೆ ಒಳಗಿಡುತ್ತಿದ್ದಳು. ಶ್ರುತಿ. ಅಡಕೆ ತೋಟದಲ್ಲಿ ಯುದ್ಧಕಹಳೆಯಂತೆ ಕಾಡುವ ಚಂಡೆ ಸದ್ದಿನ ಹಂಗೇ ಬೇಡವೆಂದು ಓದಿ ಓದಿ ಓಡಿ ಓಡಿ ಹುಡುಗಿ ಅಮೆರಿಕೆ ವರೆಗೆ ಬಂದು ತಲುಪಿದ್ದ ಹಾದಿಯಲ್ಲಿ ಅವಳಿಗೆ ಗೆಜ್ಜೆ ಸದ್ದನ್ನು ಮಾತ್ರ ಅಡಗಿಸಲಾಗಲೇ ಇಲ್ಲ.

ಶ್ರುತಿ ಗೆಜ್ಜೆ ಕಟ್ಟಿ ಎಷ್ಟೆಲ್ಲಾ ದಿನವಾಗಿತ್ತು. ಈಗಿರುವ ಅಪಾರ್ಟ್‌ಮೆಂಟ್‌ನಲ್ಲಿ ಒಮ್ಮೆ ಜೋರುಸಂಗೀತಕ್ಕೆ ಹೆಜ್ಜೆ ಹಾಕಿ ಕೆಳಗಿನ ಅಂತಸ್ತಿನ ಅಜ್ಜಿ ಉದ್ದನೊಂದು ಕೋಲಿಂದ ಸೀಲಿಂಗ್ ಬಡಿದು ಅಲ್ಲಿಗೆ ಸಮಾಪ್ತಿಯಾದ ಅವಳ ಒಂಟಿನೃತ್ಯ ಕಾರ್ಯಕ್ರಮ, ಮತ್ತೆಂದೂ ಕುಣಿಯುವುದು ಹೋಗಲಿ ತೊನೆಯುವ ಗೋಜಿಗೂ ಹೋಗಿರಲಿಲ್ಲ.

ಇಂದು ಮನೆಗೆ ಬಂದವಳೇ ಸೂಟ್‌ಕೇಸ್ ತೆಗೆದು ಗೆಜ್ಜೆಯನ್ನು ಹೊರಗಿಟ್ಟಳು. ಎಲ್ಲ ಸಿಡಿತದ ಸದ್ದೆಲ್ಲ ಅಡಗುವಂತೆ ಗೆಜ್ಜೆ ಸದ್ದಾಗಬಾರದೆ ಎಂದು ಎದೆಗವಚಿಕೊಂಡಳು. ಮತ್ತೆ ಶಾಲೀನ್ ನೆನಪಾದಳು 'ಯುದ್ಧಪೀಡಿತರಿಗೆ ಬರವೆಲ್ಲಿ ಅಲ್ಲವ ಈ ಲೋಕದಲ್ಲಿ?'

*****

ಮರುದಿನ ಮತ್ತೆ ಸಂಜೆ ಆಫೀಸಿನಿಂದ ನೇರ ಅಲ್ಲಿಗೆ ನಡೆದವಳೇ, 'ಶಾಲೀನ್, ನಾಳಿನಿಂದ ನಿಮ್ಮ ಈ ಮಕ್ಕಳ ಜೊತೆಯಲ್ಲಿ ನನಗೂ ನಿಮ್ಮ ಕನಸು ಮಾರುವಿರ?'

'ಸರಿ ಅದಕ್ಕೇನಂತೆ. ಇದು ಮಾರಾಟ ನೆನಪಿರಲಿ, ಪುಕ್ಕಟೆ ಕನಸು ಹಂಚುವುದಿಲ್ಲ ನಾನು. ಸೊಂಪಾದ ಎದೆಯಲ್ಲಿ ಏನ ಬಿತ್ತಿದರೂ ಕನಸು ಬೆಳೆಯಬಹುದು. ಸುಟ್ಟು ಕರಕಾದ ನೆನಪುಗಳ ನೆಲದಲ್ಲಿ ಕಸಿ ಮಾಡಿದ ಕನಸುಗಳು ಇವು ಸುಲಭಕ್ಕೆ ಅರಳುವುದಿಲ್ಲ.'

'ಶಾಲೀನ್, ನಿಮ್ಮ ಈ ದುಬಾರಿ ಕನಸುಗಳಿಗೆ ನನ್ನ ಬಳಿ ಕೊಡುವಂತ ಬೆಲೆಯಿದೆ ಎಂದು ಹೇಳಲಾರೆ, ನೀವು ಕೇಳಿದ ಫೀಸ್ ಕೊಡಬಲ್ಲೆ, ಜೊತೆಗೊಂದಿಷ್ಟು ನನ್ನದೂ ಕರಕಲು ಎದೆಯಿದೆ' ಶ್ರುತಿ ಅಳುಕುತ್ತಲೇ ಉತ್ತರಿಸಿದಳು.

'ಫೀಸ್ ಹೆಚ್ಚಿಲ್ಲ, ಬದಲಿಗೆ ನಿನ್ನ ಭಾರತೀಯ ನೃತ್ಯವನ್ನು ನನಗೆ ಕಲಿಸಬೇಕು. ಗೆಜ್ಜೆ ಸದ್ದಿಗೆ ಬದಲಾಗಿ ಗೆಜ್ಜೆಸದ್ದನ್ನಲ್ಲದೆ ಇನ್ನೇನೂ ಕೇಳುವುದಿಲ್ಲ ಸರಿಯೇ?'

ಮೌನದ ನಗುವಿನಲ್ಲಿ ಬೆಸೆಯುವ ಗೆಜ್ಜೆ ಮತ್ತೆ ಘಂಟಿಸತೊಡಗಿತು.

## ವೈಶಾಲಿ ಹೆಗಡೆ

ಕತೆಗಾರ್ತಿ ಕಡಲತಡಿಯ ಊರಾದ ಅಂಕೋಲೆಯವರು. ಪ್ರಸ್ತುತ ವಾಸ ಅಮೆರಿಕದ ಬಾಸ್ಟನ್ ಹತ್ತಿರದಲ್ಲಿ. ವೃತ್ತಿಯಲ್ಲಿ ಸಾಫ್ಟ್‌ವೇರ್ ಎಂಜಿನಿಯರ್. ಪ್ರಕಟಿತ ಪುಸ್ತಕ 'ಒದ್ದೆಹಿಮ... ಉಪ್ಪುಗಾಳಿ' ಪ್ರಬಂಧ ಸಂಕಲನ ಪ್ರಕಟವಾಗಿದೆ. ಕತೆ, ಪ್ರಬಂಧಗಳು ಕನ್ನಡದ ಪತ್ರಿಕೆಗಳಲ್ಲಿ ಪ್ರಕಟವಾಗಿವೆ. ಹುಬ್ಬಳ್ಳಿಯ ಬಿ.ವಿ.ಬಿ. ಎಂಜಿನಿಯರಿಂಗ್ ಕಾಲೇಜಿನಲ್ಲಿ ಬಿ.ಇ. ಅಮೆರಿಕದ ಯೂನಿವರ್ಸಿಟಿ ಆಫ್ ಮ್ಯಾಸಚೂಸೆತ್ಸ್‌ನಿಂದ ಮಾಸ್ಟರ್ಸ್ ಪದವಿ. ಅಮೆರಿಕದ ಕನ್ನಡ ಕೂಟಗಳ ಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದಾರೆ.